**ಓ.ಎಸ್. ನಂಃ 8/2023**

**ಪಿ.ಡಬ್ಲ್ಯೂಃ 1**

**ದಿನಾಂಕ 27.06.2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರಃ ಶ್ರೀ ಬಿ.ಎಮ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕ 02.03.1960 ರ ನೊಂದಾಯಿತ ಖರೀದಿ ಪತ್ರದ ದೃಡಿಕೃತ ನಕಲನ್ನು ನಿಪಿ.1 ಎಂದು, ದಿನಾಂಕ 09.08.2021 ರ ನೊಂದಾಯಿತ ದಾನದಪತ್ರದ ಗಣಕೀಕೃತ ದೃಡಿಕೃತ ನಕಲನ್ನು ನಿಪಿ.2 ಎಂದು, ಅದಕ್ಕೆ ಲಗತ್ತಾದ ಪ್ರಮಾಣ ಪತ್ರವನ್ನು ನಿಪಿ.2 ಎ ಎಂದು, ದಿನಾಂಕ 30.12.2021 ರ ನೊಂದಾಯಿತ ಖರೀದಿ ಪತ್ರದ ಗಣಕೀಕೃತ ದೃಡಿಕೃತ ನಕಲನ್ನು ನಿಪಿ.3 ಎಂದು, ಅದಕ್ಕೆ ಲಗತ್ತಾದ ಪ್ರಮಾಣ ಪತ್ರವನ್ನು ನಿಪಿ.3 ಎ ಎಂದು, ದಿನಾಂಕ 03.12.2022 ರ ನೊಂದಾಯಿತ ಖರೀದಿ ಪತ್ರದ ಗಣಕೀಕೃತ ದೃಡಿಕೃತ ನಕಲನ್ನು ನಿಪಿ.4 ಎಂದು ಅದಕ್ಕೆ ಲಗತ್ತಾದ ಪ್ರಮಾಣ ಪತ್ರವನ್ನು ನಿಪಿ.4 ಎ ಎಂದು, ಪಹಣಿಗಳನ್ನು ನಿಪಿ.5 ರಿಂದ 8 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**